**ಭಾರತೀಯ ರಿಸರ್ವ್ ಬ್ಯಾಂಕ್**
**ವಿದೇಶೀ ವಿನಿಮಯ ನಿಯಂತ್ರಣ ಇಲಾಖೆ**
**ಕೇಂದ್ರ ಕಚೇರಿ**
**ಮುಂಬೈ**

ಅಧಿಸೂಚನೆ ಸಂಖ್ಯೆ : ಎಫ್‌ಇಎಂಎ. 74/2002–ಆರ್‌ಬಿ ದಿನಾಂಕ: ನವೆಂಬರ್ 1, 2002

**ವಿದೇಶೀ ವಿನಿಮಯ ನಿರ್ವಹಣಾ (ಭಾರತದಲ್ಲಿ ನಿವಾಸಿಯಾಗಿರುವ ಒಬ್ಬ ವ್ಯಕ್ತಿಯಿಂದ ವಿದೇಶೀ ಕರೆನ್ಸಿ ಖಾತೆಗಳು) (ತಿದ್ದುಪಡಿ) ವಿನಿಯಮಗಳು, 2002**

ವಿದೇಶೀ ವಿನಿಮಯ ನಿರ್ವಹಣಾ ಅಧಿನಿಯಮ, 1999ರ (1999ರ 42) 9ನೇ ಪ್ರಕರಣದ (ಬಿ) ಖಂಡದ ಮತ್ತು 47ನೇ ಪ್ರಕರಣದ (2) ನೇ ಉಪ ಪ್ರಕರಣದ (ಇ) ಖಂಡದ ಮೂಲಕ ದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ಮೇ 3, 2000 ನೇ ದಿನಾಂಕದ ತನ್ನ ಅಧಿಸೂಚನೆ ಸಂಖ್ಯೆ ಎಫ್‌ಇಎಂಎ 10/2000–ಆರ್‌ಬಿಯನ್ನು ಭಾಗಶಃ ಮಾರ್ಪಾಡು ಮಾಡಿ, ಭಾರತೀಯ ರಿಸರ್ವ್ ಬ್ಯಾಂಕು ವಿದೇಶೀ ವಿನಿಮಯ ನಿರ್ವಹಣಾ (ಭಾರತದಲ್ಲಿ ನಿವಾಸಿಯಾಗಿರುವ ಒಬ್ಬ ವ್ಯಕ್ತಿಯಿಂದ ವಿದೇಶೀ ಕರೆನ್ಸಿ ಖಾತೆಗಳು) ನಿಯ0ತ್ರಣಗಳು, 2000 ದಲ್ಲಿ ಈ ಮುಂದಿನ ತಿದ್ದುಪಡಿಗಳನ್ನು ಮಾಡುತ್ತದೆ, ಅಂದರೆ:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ:**

(ಎ) ಈ ನಿಯ0ತ್ರಣಗಳನ್ನು ವಿದೇಶೀ ವಿನಿಮಯ ನಿರ್ವಹಣಾ (ಭಾರತದಲ್ಲಿ ನಿವಾಸಿಯಾಗಿರುವ ಒಬ್ಬ ವ್ಯಕ್ತಿಯಿಂದ ವಿದೇಶೀ ಕರೆನ್ಸಿ ಖಾತೆಗಳು) (ಐದನೆಯ ತಿದ್ದುಪಡಿ) ವಿನಿಯಮಗಳು, 2002 ಎಂದು ಕರೆಯತಕ್ಕದ್ದು.
(ಬಿ) ಈ ನಿಯ0ತ್ರಣಗಳು ಅಧಿಕೃತ ರಾಜಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ನಿಯ0ತ್ರಣಗಳ ತಿದ್ದುಪಡಿ**

ವಿದೇಶೀ ವಿನಿಮಯ ನಿರ್ವಹಣಾ (ಭಾರತದಲ್ಲಿ ನಿವಾಸಿಯಾಗಿರುವ ಒಬ್ಬ ವ್ಯಕ್ತಿಯಿಂದ ವಿದೇಶೀ ಕರೆನ್ಸಿ ಖಾತೆಗಳು) ನಿಯ0ತ್ರಣಗಳು, 2000 ದಲ್ಲಿ 5ನೇ ನಿಯ0ತ್ರಣದ ನಂತರ ಈ ಮುಂದಿನ ನಿಯ0ತ್ರಣವನ್ನು ಸೇರಿಸತಕ್ಕದ್ದು, ಅಂದರೆ:–
" 5ಎ. ನಿವಾಸಿ ವಿದೇಶೀ ಕರೆನ್ಸಿ (ದೇಶೀಯ) ಖಾತೆಯನ್ನು ತೆರೆಯುವುದು, ಹೊಂದಿರುವುದು ಮತ್ತು ನಿರ್ವಹಿಸುವುದು.

(1) ಭಾರತದಲ್ಲಿ ನಿವಾಸಿಯಾಗಿರುವ ಒಬ್ಬ ವ್ಯಕ್ತಿಯು, ಭಾರತದಲ್ಲಿರುವ ಒಬ್ಬ ಅಧಿಕೃತ ವ್ಯಾಪಾರಿಯ ಬಳಿ
(ಎ) ಭಾರತದ ಹೊರಗಿನ ಯಾವುದೇ ಸ್ಥಳಕ್ಕೆ ಭೇಟಿ ನೀಡಿರುವಾಗ ಭಾರತದಲ್ಲಿನ ಯಾವುದೇ ವ್ಯಾಪಾರದಿಂದ ಅಥವಾ ಭಾರತದಲ್ಲಿ ಮಾಡಿದ ಕಾರ್ಯದಿಂದ ಉದ್ಭವಿಸದ ಸೇವೆಗಳಿಗೆ ಹಣ ಸಂದಾಯದ ರೂಪದಲ್ಲಿ; ಅಥವಾ
(ಬಿ) ಭಾರತದ ನಿವಾಸಿಯಾಗಿರದ ಮತ್ತು ಭಾರತಕ್ಕೆ ಭೇಟಿ ನೀಡಿರುವ ಯಾರೇ ವ್ಯಕ್ತಿಯಿಂದ, ಗೌರವಧನವಾಗಿ, ಕೊಡುಗೆಯಾಗಿ ಅಥವಾ ಸಲ್ಲಿಸಿದ ಸೇವೆಗಳಿಗೆ ಅಥವಾ ಯಾವುದೇ ಕಾನೂನುಬದ್ಧ ಹೊಣೆಗಾರಿಕೆಯ ಈಡೇರಿಕೆಗಾಗಿ;
(ಸಿ) ಭಾರತದ ಹೊರಗಿನ ಯಾವುದೇ ಸ್ಥಳಕ್ಕೆ ಭೇಟಿ ನೀಡಿರುವಾಗ ಗೌರವಧನ ಅಥವಾ ಕೊಡುಗೆ ರೂಪದಲ್ಲಿ– ಕರೆನ್ಸಿ ನೋಟುಗಳು, ಬ್ಯಾಂಕು ನೋಟುಗಳು ಮತ್ತು ಟ್ರ್ಯಾವಲರ್ಸ್ ಚೆಕ್‌ಗಳ ರೂಪದಲ್ಲಿ ಗಳಿಸಿದ ವಿದೇಶೀ ವಿನಿಮಯದ ಹಣದಿಂದ ನಿವಾಸಿ ವಿದೇಶೀ ಕರೆನ್ಸಿ (ದೇಶೀಯ) ಖಾತೆ ಎಂಬ ಒಂದು ವಿದೇಶೀ ಕರೆನ್ಸಿ ಖಾತೆಯನ್ನು ತೆರೆಯಬಹುದು, ಹೊಂದಿರಬಹುದು ಮತ್ತು ನಿರ್ವಹಿಸಬಹುದು; ಅಥವಾ
(ಡಿ) ಇದು ವಿದೇಶದಲ್ಲಿ ಪ್ರಯಾಣ ಮಾಡುವುದಕ್ಕಾಗಿ ಒಬ್ಬ ಅಧಿಕೃತ ವ್ಯಕ್ತಿಯಿಂದ ಅವನು ಗಳಿಸಿದ ವಿದೇಶೀ ವಿನಿಮಯದ ಖರ್ಚು ಮಾಡಿರದ ಹಣವನ್ನು ಪ್ರತಿನಿಧಿಸುತ್ತದೆ.

(2) ವಿದೇಶೀ ವಿನಿಮಯ ನಿರ್ವಹಣಾ (ಚಾಲ್ತಿ ಖಾತೆ ವ್ಯವಹಾರಗಳು) ನಿಯಮಗಳು, 2000ರ ಉಪಬಂಧಗಳ ಅನುಸಾರವಾಗಿ ಚಾಲ್ತಿ ಖಾತೆ ವ್ಯವಹಾರಗಳಿಗೆ ಮಾಡುವ ಸಂದಾಯಗಳನ್ನು ಮತ್ತು ವಿದೇಶೀ ವಿನಿಮಯ ನಿರ್ವಹಣಾ (ಅನುಮತೀಯ ಬಂಡವಾಳ ಖಾತೆ ವ್ಯವಹಾರಗಳು) ವಿನಿಯಮಗಳು, 2000ದ ಮೇರೆಗೆ ಅನುಮತಿಸಬಹುದಾದ ಬಂಡವಾಳ ಖಾತೆ ವ್ಯವಹಾರಗಳಿಗಾಗಿ ಮಾಡುವ ಸಂದಾಯಗಳನ್ನು ಈ ಖಾತೆಗೆ ಖರ್ಚು ಹಾಕತಕ್ಕದ್ದು.

(3) ಈ ಖಾತೆಯನ್ನು ಚಾಲ್ತಿ ಖಾತೆಯ ರೂಪದಲ್ಲಿ ನಿರ್ವಹಿಸತಕ್ಕದ್ದು ಮತ್ತು ಇದಕ್ಕೆ ಯಾವುದೇ ಬಡ್ಡಿ ದೊರೆಯತಕ್ಕದ್ದಲ್ಲ.

(4) ಖಾತೆಯಲ್ಲಿನ ಶಿಲ್ಕುಗಳ ಮೇಲೆ ಯಾವುದೇ ಗರಿಷ್ಠ ಮಿತಿ ಇರತಕ್ಕದ್ದಲ್ಲ."

ಸಹಿ/–

(ಕೆ.ಜೆ. ಉದೇಶಿ)
ಕಾರ್ಯ ನಿರ್ವಾಹಕ ನಿರ್ದೇಶಕರು.